

ನಿಜವಾದ ಅರ್ಥ ಅಂದ್ರೆ ಅದು ನಿನ್ನ ಮತ್ತು ನನ್ನ ಸಂಬಂಧ ಮಾತ್ರ ಆಗಿರೋದಕ್ಕೆ ಸಾಧ್ಯ. ನನ್ನಪ್ಪನಿಗೂ ನಾನು ಯಾರೂ ಅಂತಾ ಗೊತ್ತಿರಲ್ಲಿಲ್ಲ. ಅದಕ್ಕೆ ನಾನು ಅಪ್ಪನಿಗೆ ಕಾಣ್ತಾ ಇರಲಿಲ್ಲಿ. ಆದ್ರೆ ನಿನ್ನ ಸ್ಪರ್ಶದಲ್ಲಿ, ನಿನ್ನ ಆಯಾಸದಲ್ಲಿ, ನೀ ಬಿಡುವ ಉಸಿರಿನಲ್ಲಿ, ನೀ ನಡೆವ ಹೆಜ್ಜೆಯಲಿ, ನೀ ಮಲಗೋ ಭಂಗಿಯಲಿ, ನೀ ತಿನ್ನೋ ಆಹಾರದಲಿ, ನಿನ್ನ ಹೆಣ್ತನದ ಮಂದಹಾಸದಲಿ ಪ್ರತಿ ಕ್ಷಣ ನಾನು ಕಾಣ್ತಾ ಇದ್ದೆ. ನಿನ್ನ ಮೂಲಕ ಎಲ್ಲರನ್ನು ನಾ ನೋಡ್ತಾ ಇದ್ದೆ. ನೀನು ಪ್ರೀತಿಸುವ ಎಲ್ಲರನ್ನು ನಾನು ಪ್ರೀತಿಸ್ತಾ ಇದ್ದೆ. ನನಗೆ ಗರ್ಭವೇ ಪ್ರಪಂಚವಾಗಿತ್ತು. ಹೊರಗಿನ ಪ್ರಪಂಚಕ್ಕೆ ಬರುವ ಆತುರದಲ್ಲಿ ಕೆಲವೊಮ್ಮೆ ಕುಣಿದು ನಿನಗೆ ನೋವು ಕೊಟ್ಟದ್ದಕ್ಕೆ ದಯವಿಟ್ಟು ಕ್ಷಮಿಸಮ್ಮಾ. ಓಹ್....! ಅದೆಲ್ಲ ಇಂದು ಮುಗಿದ ಕಥೆ.

ನಾನು ಯಾರೆಂದು ತಿಳಿಯದೇ ಹೋಗಿದ್ದರೆ ಬಹುಶಃ ನಾನು ಕಂಡ ಕನಸುಗಳೆಲ್ಲ ನನಸಾಗುತ್ತಿದ್ದವು. ನಾನು ಅಣ್ಣನ ಜೊತೆಯಲ್ಲಿ ಮಣ್ಣು ಗುಡ್ಡೆ ಕಟ್ಟಿ ಗುಬ್ಬಚ್ಚಿಗೂಡಿನ ಆಟವಾಡ್ತಾ ಇದ್ದೆ. ಅದ್ಯಾವಾಗ ನಾನು ಯಾರೆಂದು ಅಪ್ಪನಿಗೆ ತಿಳಿಯಿತೋ ಅಲ್ಲಿಗೆ ಎಲ್ಲವು ವಿರುದ್ಧವಾಗುತ್ತ ಸಾಗಿದವು. ಅಲ್ಲಿಯವರೆಗೂ ನಾನು ಯಾರು ಎಂದು ಅಪ್ಪನಿಗೆ ಗೊತ್ತಿರಲಿಲ್ಲ. ಅದಕ್ಕೆ ನೀ ನಡೆವಾಗ ಸ್ವಲ್ಪ ಎಡವಿದರೂ ಓಡಿ ಬರುತ್ತಿದ್ದ ಅಪ್ಪ, ಆಯಾಸವಾಗಿ ಉಸ್ಸೆಂದು ಬೆವರು ಹರಿಸಿದರೆ ಒರೆಸುತ್ತಿದ್ದ ಅಪ್ಪ, ಪಕ್ಕದಲ್ಲಿ ಕುಳಿತು ಗಾಳಿ ಬೀಸುತ್ತಿದ್ದ ಅಪ್ಪ, ಹೊಟ್ಟೆಗೆ ಕಿವಿ ಇಟ್ಟು ಪುಟ್ಟ ಹೆಜ್ಜೆ ಧ್ವನಿ ಕೇಳುತ್ತಿದ್ದ ಅಪ್ಪ, ಅಪ್ಪಿ ತಪ್ಪಿಯೂ ನಿನ್ನತ್ತ ಮುಖ ಹೊರಳಿಸಲಿಲ್ಲ. ನನ್ನತ್ತ ಒಂದು ಸಣ್ಣ ಯೋಚನೆಯನ್ನು ಮಾಡಲಿಲ್ಲ. ಕಾರಣ ನಾನ್ಯಾರೆಂದು ಡಾಕ್ಟರ್ ಅಂಕಲ್ ಹೇಳಿದ್ದರು. ಅಲ್ಲಿಯವರೆಗೂ ನಿನಗೂ ಮಾಂಸದ ಮುದ್ದೆಯಾಗಿದ್ದ ನಾನು ಆವತ್ತು ಹೆಣ್ಣು ಭ್ರೂಣ ಎಂದು ನಾಮಕರಣಗೊಂಡಿದ್ದೆ. ನಿಜಾ ಅಮ್ಮಾ ಅಲ್ಲಿಯವರೆಗೂ ನನಗೇನೂ ಗೊತ್ತಿರಲಿಲ್ಲ. ಅಣ್ಣನ ಮೇಲೆ ಪ್ರೀತಿ ತೋರಿಸುತ್ತಿದ್ದ ಅವರೆಲ್ಲ ನನ್ನನ್ನು ಪ್ರೀತಿಸುತ್ತಾರೆಂಬ ಹುಚ್ಚು ಭ್ರಮೆಯಲ್ಲಿದ್ದೆ. ಆದರೆ ಪ್ರೀತಿ ಪಡೆಯುವುದಕ್ಕೆ ಗಂಡು ಮಾತ್ರ ಅರ್ಹ ಎಂದು ನಾನು ಹೊರ ಬರುವ ಮೊದಲೇ ಗೊತ್ತಾಗಿ ಬಿಟ್ಟಿತ್ತು. ಅದಕ್ಕೆ ಅದೆಷ್ಟು ಬಾರಿ ಒಳಗೆ ಅತ್ತಿದ್ದೇನೋ ಅದು ದೇವರಿಗೆ ಗೊತ್ತು. ಅವತ್ತು ನೀನು ಹೊಟ್ಟೆ ನೋವು ಎಂದು ಕಷ್ಟ ಪಡ್ತಾ ಇದ್ದೆಯಲ್ವಾ ಆವಾಗ ನಾನು ಇದನ್ನೇ...... ನೆನೆದು ಅಳ್ತಾ ಇದ್ದೆ ಗೊತ್ತಾ.

ನಾನು ಹೆಣ್ಣು ಎಂದು ಗೊತ್ತಾದಾಗ, ಅಜ್ಜಿ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಎಲ್ಲ ಬಂದು ಹೆಣ್ಣು ಬೇಡ. ಹೆಣ್ಣು ಹೆತ್ತರೆ ಸುಮ್ಮನೆ ಖರ್ಚಿಗೆ ಮೂಲ. ಇನ್ನೊಂದು ಗಂಡಿರಲಿ ಇದನ್ನು ತೆಗೆಸಿ ಬಿಡು ಅಂತ ಹೇಳಿದ್ರು. ಯಾಕಮ್ಮಾ ಅವರು ಹೀಗೆ ಹೇಳಿದರು? ಅವರೆಲ್ಲ ಯಾರು? ನೋಡೋಕೆ ನನ್ನ ಹಾಗೆ ಇದ್ದಾರೆ ಅವರು ಹೆಣ್ಣಲ್ವಾ ಅಮ್ಮಾ? ಅವರ ಮಾತಿನ ಮೋಡಿಗೆ ತಲೆದೂಗಿ ಹೂಂ..ಗುಟ್ಟುತ್ತಿದ್ದ ಅಪ್ಪ ಅಜ್ಜಿಯ ಒಡಲಲ್ಲಿದ್ದಾಗ ನನ್ನ ರೂಪ ಪಡೆದಿದ್ದರೆ ಏನು ಮಾಡುತ್ತಿದ್ದ? ನನ್ನನ್ನ ಅಕ್ಕರೆಯಿಂದ, ಆಶೆ ಕಂಗಳಿಂದ, ನಾಳೆಯ ಕನಸಿನಿಂದ, ಮುಂಬರುವ ಖುಷಿಯಿಂದ ಹೊತ್ತುಕೊಂಡ ನಿಂತ ನೀನು ನಿನ್ನ ಅಮ್ಮನ ಒಡಲಲ್ಲಿದ್ದಾಗ ಇದೇ ಕ್ಷಣ ಬಂದಿದ್ದರೆ ಅಪ್ಪನಿಗೆ ಹೆಂಡತಿಯಾಗಿ, ಅಜ್ಜ ಅಜ್ಜಿಗೆ ಸೊಸೆಯಾಗಿ ಸಿಗುತ್ತಿದ್ದೆಯಾ? ಇದರ ಕನಿಷ್ಠ ಪರಿವೆಯೂ ಇಲ್ಲದೆ ಇವರು ಮಾಡುತ್ತಿರುವುದು ನೋಡಿ ಹೇಸಿಗೆ ಎನಿಸುತ್ತಿತ್ತು ಅಮ್ಮಾ. ನನ್ನ ರಕ್ಷಿಸಬೇಕೆಂದು ನೀನು ಅವರಲ್ಲಿ ಗೋಗರೆಯುತ್ತಿದ್ದ ಕ್ಷಣ ನೋಡಿದರೆ ಆಗಿನ್ನೂ ಮೂಡುತ್ತಿದ್ದ ನನ್ನ ಕರುಳ ಬಳ್ಳಿಯಲ್ಲೂ ಮರುಕ ಉಂಟಾಗುತ್ತಿತ್ತು. ನಿನ್ನ ಆಕ್ರಂದನ ಅವರ ಕಿವಿಗೆ ಬೀಳುತ್ತಿದ್ದರೂ ಅವರು ಅಕ್ಷರಶಃ ಕಿವುಡಾಗಿದ್ದರು. ಆವಾಗಲೇ ನನಗೆ ಭಯವಾಗೋಕೆ ಶುರುವಾಯಿತು. ನಾನು ಬದುಕಿಗಾಗಿ ಅಂಗಲಾಚಿದ್ದು ಅವರಿಗೆ ಕಾಣಿಸಿಲಿಲ್ಲ. ನನ್ನನ್ನು ಕೊಲ್ಲಬೇಡಿ ನಾನು ಬದುಕ ಬೇಕು ಅಂತ ಒಡಲೊಳಗೆ ಕೈ ಮುಗಿದು ಅಪ್ಪನನ್ನು ಬೇಡಿಕೊಂಡೆ. ಆದರೆ ಅಪ್ಪ ಗಂಡು ಅಲ್ವಾ; ಅದಕ್ಕೆ ನನ್ನ ಆಕ್ರಂದನ ಅವರ ಆಕ್ರಮಣದಲ್ಲಿ ಮುಚ್ಚಿ ಹೋಯಿತು. ಕೊನೆಗೆ ಡಾಕ್ಟರ್ ಅಂಕಲ್‌ಗೂ ಕೂಡ ಪರಿಪರಿಯಾಗಿ ಬೇಡಿ ಕೊಂಡೆ. ಪ್ರಾಣ ಉಳಿಸಬೇಕಾದ ಅವರು ಪ್ರಾಣಿಯಂತೆ ನಡೆದುಕೊಂಡರು. ದುಡ್ಡಿಗಾಗಿ ಕೊಲೆ ಮಾಡಿದ ಕೊಲೆಗಾರರವರು. ಅಂತೂ ಹೆಣ್ಣು ಅನ್ನುವ ನೆಪದಲ್ಲಿ ಭೂಮಿಗೆ ಬರುವ ಮೊದಲೆ ನನ್ನನ್ನು ಪಾತಾಳಕ್ಕಟ್ಟಿದರು.

ನಾನು ತುಂಬ ಚಿಕ್ಕವಳು. ಮುದ್ದಾಗಿರುವ ನನ್ನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ತುಂಬ ಪ್ರೀತಿಯಿಂದ ಸಲುಹುತ್ತಿದ್ದಾರೆ. ನನಗೆ ಗೊತ್ತಿರಲಿಲ್ಲ ಅಮ್ಮಾ ಹೆಣ್ಣಾಗಿ ಬಂದರೆ ಕೊಲ್ಲುತ್ತಾರೆ ಅಂತ. ನಾನು ಬರುವ ಮೊದಲು ನನ್ನಪ್ಪನ ತಾಯಿಯನ್ನು, ಅವನ ತಂಗಿಯನ್ನು, ಮಾವನ ಹೆಂಡತಿಯನ್ನು, ನನ್ನ ಕೊಲೆ ಮಾಡಿದ ವೈದ್ಯನ ತಾಯಿಯನ್ನು, ಆತನ ಸತಿಯನ್ನು, ಅವನ ಮಗಳನ್ನು, ಕೊಲೆಗೆ ಸಹಕರಿಸಿದ ನರ್ಸ್‌ಗಳನ್ನು ನೋಡಿ ಹೆಣ್ಣಾಗಬೇಕೆಂದು ಬಯಸಿದ್ದೆ. ಇದರ ಪರಿವೆ ಅವರಿಗಿದ್ದರೆ ಬಹುಶಃ ನಾನು ಬದುಕುತ್ತಿದ್ದೆ. ಅದೇನೆ ಇರಲಿ ನಾನು ಎಲ್ಲವನ್ನು ಮರೆಯಬೇಕೆಂದರು ನೀನು ಮಾತ್ರ ಬೆಂಬಿಡದೇ ಕಾಡ್ತಾ ಇರ್ತಿಯಾ. ಜಗತ್ತಿನ ಪರಮ ಶ್ರೇಷ್ಠವಾದ ಸತ್ಯ ನೀನು. ಅದಕ್ಕೆ ನೀನು ನನ್ನ ನೆನೆಸಿಕೊಂಡು ಅಳ್ತಿಯಾ ಅಂತ ಗೊತ್ತು. ಅದಕ್ಕೆ ಸ್ವರ್ಗದಿಂದ ಈ ಪತ್ರ ಬರೀತಾ ಇದ್ದೀನಿ. ಆ ನರಕಕ್ಕೆ ಬರಲು ಇಷ್ಟ ಇಲ್ಲ. ಆದರೆ ಸ್ವರ್ಗಕ್ಕೂ ಮಿಗಿಲಾದ ನಿನ್ನ ಮಡಿಲಲ್ಲಿ ಮತ್ತೊಮ್ಮೆ ಮಗುವಾಗುವ ಆಶೆ ನನ್ನ ಮತ್ತೆ ಮತ್ತೆ ಕಾಡ್ತಾ ಇದೆ. ಅಪ್ಪನಿಗೆ ಮತ್ತೊಮ್ಮೆ ತಿಳಿಸಿ ಹೇಳು, ಕೇವಲ ಕೀರ್ತಿಗೆ ಗಂಡು ಮಕ್ಕಳಿದ್ದರೆ ಸಾಲದು; ಆರತಿಗೆ ಹೆಣ್ಣು ಮಗಳು ಬೇಕು. ಹೆಣ್ಣು ಹುಣ್ಣಲ್ಲ ಸಂಸಾರದ ಕಣ್ಣು ಅಂತ, ಜಗತ್ತು ಉಳಿಯಬೇಕಾದರೆ ಹೆಣ್ಣು ಬೇಕೆ ಬೇಕು ಅಂತ. ದೇವರು ಮತ್ತೊಮ್ಮೆ ಅವಕಾಶ ಕೊಡುತ್ತಾನೆ. ನನ್ನ ಕೊಲ್ಲುವುದಕ್ಕೆ ಕಾರಣನಾದ ನನ್ನ ಅಪ್ಪನಿಗೆ ತಪ್ಪಿನ ಅರಿವಾಗಿದ್ದರೆ ದೇವರಲ್ಲಿ ಬೇಡಿಕೊಳ್ಳುವುದಕ್ಕೆ ಹೇಳು. ಮತ್ತೊಮ್ಮೆ ಬಂದು ಮಡಿಲು ತುಂಬುವೆ. ನಿಮ್ಮ ಮನೆಯ ಬೆಳಕಾಗುವೆ ಅಮ್ಮ

**I love you mom. I hate you dad. but still I miss you dad.**

(ಹೆಣ್ಣೆಂಬ ಕಾರಣಕ್ಕೆ ಭ್ರೂಣ ಹತ್ಯೆ ಮಾಡುವವರಿಗೆ ಅರ್ಥ ಮಾಡಿಸಲು ಸತ್ತ ಭ್ರೂಣ ಪತ್ರ ಬರೆಸಿದಂತೆ ಈ ಲೇಖನ ಚಿತ್ರಿಸಲಾಗಿದೆ.)